

## ಇದು ಹೂವಲ್ಲ ಹಣ್ಣು

ಪ್ರಕೃತಿಯಲ್ಲಿ ಹಲವಾರು ಅಚ್ಚರಿ ಮೂಡಿಸುವ ಸಂಗತಿಗಳು ನಡೆಯುತ್ತಿರುತ್ತವೆ. ಕೆಲವು ನಮ್ಮ ಮನಸ್ಸಿಗೆ ಮುದನೀಡಿ 'ಹೀಗೂ ಉಂಟೆ' ಎಂದೆನಿಸುತ್ತವೆ. ಕೆಲವೊಮ್ಮೆ ಜೋಡಿಯಾಗಿ ಬೆಳೆದಿರುವ ಹಣ್ಣು, ತರಕಾರಿಗಳು ನಮ್ಮನ್ನು ಅಚ್ಚರಿಗೆ ತಳ್ಳುತ್ತವೆ. ಚಿತ್ರದಲ್ಲಿರುವುದು ನಮ್ಮ ಮನೆಯ ಕೈತೋಟದಲ್ಲಿ ಬೆಳೆದ ಅನಾನಸ್ ಹಣ್ಣು. ಮೇಲ್ನೋಟಕ್ಕೆ ವಿದೇಶಿ ತಳಿಯ ಬಣ್ಣ ಬಣ್ಣದ ಆಕರ್ಷಕ ಹೂವೆಂಬ ಭ್ರಮೆ ಹುಟ್ಟಿಸುತ್ತದೆ. ಅಸಲಿಗೆ ಇದು ಅನಾನಸ್ ಹಣ್ಣುಗಳ ಸಮೂಹವಾಗಿದ್ದು, ಕೇಂದ್ರಭಾಗದಲ್ಲಿ ದೊಡ್ಡ ಹಣ್ಣಿದೆ. ಅದರ ಸುತ್ತಲೂ ಒಂಬತ್ತು ಪುಟ್ಟ ಹಣ್ಣುಗಳು ಜನ್ಮ ತಾಳಿರುವುದು ಸೊಗಸಾಗಿ ಕಾಣುತ್ತಿದೆ.

–ಲ್ಯಾನ್ಸಿ ಡಿ. ಕೋಸ್ತಾ, ಮಂಗಳೂರು



## ಬೀಚ್‌ನಲ್ಲಿ ಆಕರ್ಷಣೆಯ ಪ್ರತಿಮೆ

'ಚಂಡಮಾರುತ ಬರುತ್ತದೆ. ಬನ್ರೋ, ಬಿರಬಿರನೆ ದಡಕ್ಕೆ ಸೇರಿಸೋಣ' ಎಂದೆನ್ನುತ್ತಾ ಮೀನುಗಾರರೆಲ್ಲಾ ಸೇರಿ ದೋಣಿಯನ್ನು ದಡಕ್ಕೆ ತಳ್ಳುತ್ತಿದ್ದಾರೆ. ಅವರ ಈ ಸಾಹಸವನ್ನು ಕಂಡು ದಾರಿಹೋಕ ವಿನಮ್ರತೆಯಿಂದ ಅವರಿಗೆ ನಮಿಸುತ್ತಿದ್ದಾನೆ.

ಚಿತ್ರ ಕಂಡಾಕ್ಷಣ ನನ್ನ ಮನದಲ್ಲಿ ಮೂಡಿದ ಕಲ್ಪನೆಯಿದು. ಆದರೆ ಇಲ್ಲಿ ಕಾಣುವ ನಮಸ್ಕಾರ ಭಂಗಿಯ ಪ್ರವಾಸಿಗನನ್ನು ಹೊರತುಪಡಿಸಿ ಉಳಿದದ್ದೆಲ್ಲವೂ ಕಲಾಕೃತಿಗಳೇ. ಈ ಕಲಾಕೃತಿಯನ್ನು ಕರ್ನಾಟಕದ ಎರಡನೇ ದೊಡ್ಡ ಬಂದರು ಎನಿಸಿದ ಮಲ್ಪೆಯ ಸಮುದ್ರತೀರದಲ್ಲಿ ಕಾಣಬಹುದು. ಸಿಮೆಂಟ್ ಮತ್ತು ಮರಳಿನಿಂದ ಅರಳಿಸಿದ ಮೀನುಗಾರರ ಕುಟುಂಬದ ಈ ಪ್ರತಿಮೆ ಸಮುದ್ರ ನಡಿಗೆಯ ಸೊಬಗನ್ನು ಕಟ್ಟಿಕೊಡುತ್ತದೆ. ಉಡುಪಿ ಜಿಲ್ಲೆಯಲ್ಲಿರುವ ಮಲ್ಪೆ ಸೀ ವಾಕ್ ಇಂತಹ ಹಲವಾರು ಕಲಾ ಪ್ರದರ್ಶನಕ್ಕೆ ಪ್ರೋತ್ಸಾಹ ನೀಡುತ್ತದೆ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ



## ಗಿನ್ನಿಸ್ ದಾಖಲೆಗೆ ಲಂಬಾಣಿ ಕಸೂತಿ




ಹಂಪಿಯಲ್ಲಿ ಈಚೆಗೆ ನಡೆದ ಜಿ20 ಶೃಂಗಸಭೆಯಲ್ಲಿ ಶ್ರಮ, ಸಂಸ್ಕೃತಿಯ ಪ್ರತೀಕದಂತಿರುವ ಲಂಬಾಣಿ ಕಸೂತಿ ಕಲೆಯು ಗಿನ್ನಿಸ್ ಬುಕ್ ರೆಕಾರ್ಡಿಗೆ ಅಧಿಕೃತವಾಗಿ ಸೇರ್ಪಡೆಯಾಗಿದೆ. ಈ ಮುನ್ನ 1000 ಕಸೂತಿ ಕಲೆಗಳ ಪ್ಯಾಚ್‌ಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದು ಗಿನ್ನಿಸ್ ದಾಖಲೆಗೆ ಪಾತ್ರವಾಗಿತ್ತು. ಆದರೆ, ಇದೀಗ ಹಳೆಯ ದಾಖಲೆಯನ್ನು ಮುರಿದು, ಸಂಡೂರಿನ ಲಂಬಾಣಿ ಕಲಾ ಕೇಂದ್ರದ 450 ಮಹಿಳೆಯರು, ಒಂದು ತಿಂಗಳ ಅವಧಿಯಲ್ಲಿ ತಯಾರಿಸಿದ 1755 ವಿವಿಧ ರಚನಾ ಕ್ರಮವುಳ್ಳ ಕಸೂತಿ ಪ್ಯಾಚ್‌ಗಳನ್ನು ಪ್ರದರ್ಶನ ಮಾಡಿ ಹೊಸ ದಾಖಲೆ ಬರೆದಿದ್ದಾರೆ. ವಿಶ್ವವಿಖ್ಯಾತ ಹಂಪಿಯ ಬಸವಣ್ಣನ ಮಂಟಪದ ಬಳಿ ಲಂಡನ್ ಗಿನ್ನಿಸ್ ಬುಕ್ ಆಫ್ ರೆಕಾರ್ಡ್ ಅಧಿಕೃತ ತೀರ್ಪುಗಾರ ರಿಷಿನಾಥ್, ಲಂಬಾಣಿ ಕಸೂತಿ ಕಲೆಗೆ ಸಂದ ಗಿನ್ನಿಸ್ ರೆಕಾರ್ಡ್ ಪ್ರಮಾಣಪತ್ರವನ್ನು ಹಸ್ತಾಂತರಿಸಿದ್ದಾರೆ.

1988ರಲ್ಲಿ ಕೇವಲ 5 ಲಂಬಾಣಿ ಮಹಿಳೆಯರಿಂದ ಲಂಬಾಣಿ ಕುಶಲ ಕಲಾ ಕೇಂದ್ರವು ಸಂಡೂರಿನಲ್ಲಿ ಪ್ರಾರಂಭವಾಗಿತ್ತು. ಈಗ ಆ ಕೇಂದ್ರವು 600 ಮಹಿಳೆಯರಿಂದ ಮುನ್ನಡೆಯುತ್ತಿದೆ. ಪಾರಂಪರಿಕವಾಗಿ ತಾಂಡಾಗಳಿಗೆ ಸೀಮಿತವಾಗಿದ್ದ ಲಂಬಾಣಿ ಕಸೂತಿ ಕಲೆಗೆ ಸಾಂಸ್ಕೃತಿಕ ರೂಪ ನೀಡಿ 'ಜಿಯೊಗ್ರಾಫಿಕಲ್ ಇಂಡೆಕ್ಸ್' ಟ್ಯಾಗ್ ಪಡೆಯುವಲ್ಲಿ ಯಶಸ್ವಿಯಾಗಿದೆ. ಕಲಾತ್ಮಕ ಕಸೂತಿಗೆ ಸಿಕ್ಕ ಮನ್ನಣೆಯ ವಿಶೇಷವೆಂದರೆ ವಿವಿಧ ರೀತಿಯ 29 ಕಲಾತ್ಮಕ ಕಸೂತಿಗಳನ್ನು ಇಲ್ಲಿ ರಚಿಸಲಾಗುತ್ತಿದೆ. ಈ ಕೇಂದ್ರಕ್ಕೆ ರಾಷ್ಟ್ರ ಪ್ರಶಸ್ತಿ, ಯುನೆಸ್ಕೊ ಮನ್ನಣೆ ಹಾಗೂ ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿಯೂ ಲಭಿಸಿದೆ.

–ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ